ನಿರ್ದೇಶಕರ ಕಛೇರಿ
ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22864212.
ಫ್ಯಾಕ್ಸ್: 080-22865958.
**Email: directorgokdom@gmail.com**
**Web: www.gokdom.com**
20ನೇ ಮಹಡಿ, ವಿ.ವಿ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ:ಅಸಂನಿ/ಕ್ರಿ.ಪ್ರೋ.ಧ/ಸಿಆರ್-01/2014-15 ದಿನಾಂಕ: 29.05.2013

**ಗೆ,**
**ಜಿಲ್ಲಾ ಅಧಿಕಾರಿಗಳು,**
**ಹಿಂದುಳಿದ ವರ್ಗಗಳ ಮತ್ತು**
**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,**
**------30-------------ಜಿಲ್ಲೆ.**

**ಮಾನ್ಯರೆ,**

**ವಿಷಯ:** 2014-15ನೇ ಸಾಲಿಗೆ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಉತ್ತೇಜನವನ್ನು ನೀಡುವ ಪ್ರೋತ್ಸಾಹ ಧನ ಯೋಜನೆಯಡಿ ಜಿಲ್ಲಾವಾರು ತಾತ್ಕಾಲಿಕ ಆರ್ಥಿಕ ಗುರಿಗಳನ್ನು ನಿಗಧಿಪಡಿಸುವ ಕುರಿತು.

**ಉಲ್ಲೇಖ:** ಸರ್ಕಾರಿ ಆದೇಶ ಸಂಖ್ಯೆ:ಸಕಇ 87 ಅಸಂಯೋ 2006(2),ದಿ: 09.08.2006.

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶ ಸಂಖ್ಯೆ:ಸಕಇ 87 ಅಸಂಯೋ 2006(2), ದಿ: 09.08.2006ರ ಆದೇಶದಲ್ಲಿ ಪ್ರತಿ ಜಿಲ್ಲೆಯ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿಯಲ್ಲಿ ಉತ್ತೀರ್ಣರಾದ ಮತ್ತು ಆ ವರ್ಷದಲ್ಲಿ ತೇರ್ಗಡೆ ಹೊಂದಿ ಕಲೆ, ವಾಣಿಜ್ಯ ಮತ್ತು ವೃತ್ತಿಪರೇತರ ಪದವೀಧರರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ, ರೂ.3,000/-(ಪಿ.ಯು.ಸಿ), ರೂ.4000/-(ಪಧವೀಧರ) ಮತ್ತು ರೂ.5000/-(ಸ್ನಾತಕೋತ್ತರ)ವನ್ನು ಪ್ರೋತ್ಸಾಹಧನವನ್ನು ನೀಡಲು ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 200 ಎಂಡಿಎಸ್ 2013, ದಿನಾಂಕ:15.04.2014ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಕಾರ್ಯಕ್ರಮಗಳನ್ನು ಮುಂದುವರೆಸಿದ್ದು, ಅದರಲ್ಲಿ ಕ್ರೈಸ್ತರ ಅಭಿವೃದ್ಧಿ ಯೋಜನೆಯನ್ನು ಮುಂದುವರೆಸಲಾಗಿದೆ.

2014-15ನೇ ಸಾಲಿನಲ್ಲಿ ಕ್ರೈಸ್ತರ ಅಭಿವೃದ್ಧಿ ಯೋಜನೆಯಡಿ ರೂ.6000.00 ಲಕ್ಷಗಳ ಆಯವ್ಯಯ ಒದಗಿಸಿದ್ದು, ಅದರಲ್ಲಿ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಕಾರ್ಯಕ್ರಮಕ್ಕಾಗಿ ರೂ.900.00 ಲಕ್ಷಗಳನ್ನು ಆಯವ್ಯಯ ನಿಗದಿಪಡಿಸಲಾಗಿದೆ. ಸದರಿ ಅನುದಾನವನ್ನು 30 ಜಿಲ್ಲೆಗಳಿಗೆ ಆರ್ಥಿಕ ಗುರಿಗಳನ್ನು ನಿಗಧಿಪಡಿಸಿದೆ. ಅನುಬಂಧದಲ್ಲಿ ಲಗತ್ತಿಸಿದೆ. ಸರ್ಕಾರದ ಆದೇಶದ ಅನ್ವಯ ಹಾಗೂ ನಿಗದಿಪಡಿಸಿರುವ ಆರ್ಥಿಕ ಗುರಿಯನ್ವಯ, ತಮ್ಮ ಜಿಲ್ಲೆಯಲ್ಲಿ ವ್ಯಾಪಕ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸಿ, ನಿಯಮಾನುಸಾರ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಅನುದಾನವನ್ನುಇ ಬಿಡುಗಡೆ ಮಾಡುವುದು. ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ ಸರ್ಕಾರಿ ಆದೇಶದ ಅನುಪಾತವನ್ನು (ಎಸ್.ಎಸ್.ಎಲ್.ಸಿ:ಪಿ.ಯು.ಸಿ:ಪದವೀಧರರು) (30:40:30) ಗಮನದಲ್ಲಿಟ್ಟುಕೊಂಡು ಶ್ರೇಷ್ಠತಾ ಪಟ್ಟಿ(ಮೆರಿಟ್ ಲೀಸ್ಟ್) ತಯಾರಿಸಿ ಇದರ ಆಧಾರದ ಮೇಲೆ ಲಭ್ಯವಿರುವ ಅನುದಾನಕ್ಕೆ ಸೀಮಿತಗೊಳಿಸಿ ನಿಯಮಾನುಸಾರ ಆಯ್ಕೆ ಮಾಡುವುದು. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಮಾಹಿತಿಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

**ತಮ್ಮ ವಿಶ್ವಾಸಿ,**

**ನಿರ್ದೇಶಕರು,**
**ಅಲ್ಪ ಸಂಖ್ಯಾತರ ನಿರ್ದೇಶನಾಲಯ,**
**ಬೆಂಗಳೂರು**

H:\Chaithra\SDA\New Microsoft Office Word Document.docx14